ಓ ಎಸ್ ನಂ. 10/2017 ಪಿ.ಡಬ್ಲ್ಯೂ:1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕ: 12.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ .ಸಿ.ಆರ್.ಬಿ.ವಕೀಲರಿಂದ:**

5. ರೇವಣಸಿದ್ದಯ್ಯರವರ ದಾನಪತ್ರದಲ್ಲಿ ಶೆಡ್ಯೂಲ್ ಸ್ವತ್ತಿನ ವಿಸ್ತೀರ್ಣ ಪೂರ್ವ - ಪಶ್ಚಿಮ -52 ಅಡಿ ಮತ್ತು ಉತ್ತರ – ದಕ್ಷಿಣ -19 ಅಡಿ ಎಂದು ನಮೂದಾಗಿರುತ್ತದೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿರುವುದು ತಮ್ಮ ಮನೆ ಎಂದು ಸಾಕ್ಷಿ ಗುರುತಿಸುತ್ತಾರೆ ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸದರಿ ಮನೆಯ ಬಾಗಿಲು ಪಶ್ಚಿಮದ ಕಡೆ ಇರುತ್ತದೆ. ಸದರಿ ಮನೆಯ ಉತ್ತರದ ಕಡೆ ಖಾಲಿ ಜಾಗ ಇರುತ್ತದೆ ಎಂದರೆ ಸರಿ . ಸದರಿ ಮನೆಗೆ ದಕ್ಷಿಣದ ಕಡೆಗೂ ಬಾಗಿಲು ಇರುತ್ತದೆ. ಸಾಕ್ಷಿಗೆ ಮತ್ತೊಂದು ಭಾವಚಿತ್ರ ತೋರಿಸಲಾಗಿ ಅದು ದಕ್ಷಿಣದ ಕಡೆ ಇರುವ ಬಾಗಿಲು ಎಂದು ಸಾಕ್ಷಿ ನೋಡಿ ಗುರುತಿಸುತ್ತಾರೆ ಅದನ್ನು ನಿ.ಡಿ.2 ಎಂದು ಗುರುತಿಸಲಾಯಿತು.ಸದರಿ ಬಾಗಿಲಿಂದ ಮುಂದೆ ಕಲ್ಲುಕೂಚುಗಳನ್ನು ನಿಲ್ಲಿಸಲಾಗಿದೆ ಎಂದರೆ ಸರಿ. ನನ್ನ ಮನೆಯ ಗೋಡೆ ಮತ್ತು ಸದರಿ ಕಲ್ಲುಕೂಚುಗಳ ನಡುವೆ ಸುಮಾರು 3 ಅಡಿಗಳ ಖಾಲಿ ಜಾಗ ಇರುತ್ತದೆ ಎಂದರೆ ಸರಿ . ನನ್ನ ವಿವಾಹವಾದ ನಂತರ ಸುಮಾರು 35 ವರ್ಷಗಳಿಂದ ಕಲ್ಲೂರಿನಲ್ಲಿ ವಾಸವಿರುತ್ತೇನೆ. ಸಾಕ್ಷಿಗೆ ಮತ್ತೊಂದು ಭಾವಚಿತ್ರ ತೋರಿಸಲಾಗಿ ಅದು ನನ್ನ ಮನೆಯ ದಕ್ಷಿಣದ ಕಡೆಯ ಗೋಡೆ ಎಂದು ಸಾಕ್ಷಿ ನೋಡಿ ಗುರುತಿಸುತ್ತಾರೆ ಅದನ್ನು ನಿ.ಡಿ.3 ಎಂದು ಗುರುತಿಸಲಾಯಿತು. ನನ್ನ ಮನೆಯ ದಕ್ಷಿಣಕ್ಕೆ ಇರುವ ಕಲ್ಲು ಕೂಚುಗಳ ನಂತರ ಹಳೆಯ ಮನೆ ಇರುತ್ತದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಸದರಿ ಮನೆ ಈಗ ಇರುವುದಿಲ್ಲ ಎನ್ನುತ್ತಾರೆ.

6. ಕಲ್ಲೂರಿನಲ್ಲಿ ಸಾಲುಕೊಟ್ಟಿಗೆ ಲಿಂಗಣ್ಣ ಎನ್ನುವವರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಹೆಂಡತಿ ದೊಡ್ಡಮ್ಮ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಶಿವಲಿಂಗಯ್ಯ ಮತ್ತು ಈಶ್ವರಯ್ಯ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ . ಪ್ರತಿವಾದಿಯ ತಂದೆಯ ಹೆಸರು ಶಿವಲಿಂಗಯ್ಯ. ಸದರಿ ಲಿಂಗಣ್ಣ ಪ್ರತಿವಾದಿಯ ತಾತ ಎಂದರೆ ಸರಿ. ಈಶ್ವರಯ್ಯರವರಿಗೆ ಸುಶೀಲಮ್ಮ ಮತ್ತು ಶಾರದಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ಈಶ್ವರಯ್ಯರವರಿಗೆ ಮೊದಲನೇ ಹೆಂಡತಿಯಿಂದ ಮಹಾದೇವಯ್ಯ ಮತ್ತು ರಾಜಣ್ಣ ಎಂಬ ಇಬ್ಬರು ಮಕ್ಕಳು ಎಂದರೆ ಸರಿ . ಎರಡನೇ ಹೆಂಡತಿಯಿಂದ ಮಹೇಶ ಎಂಬ ಮಗ ಇರುತ್ತಾನೆ ಎಂದರೆ ಸರಿ. ಸದರಿ ಶಿವಲಿಂಗಯ್ಯರವರು ಅವರ ಮನೆಯ ದಕ್ಷಿಣದ ಭಾಗದಲ್ಲಿರುವ ಖಾಲಿ ಜಾಗವನ್ನು ದಿಃ 19-10-1969 ರಂದು ಖರೀದಿಸಿರುತ್ತಾರೆ ಎಂದರೆ ಸರಿ. ಅದರ ವಿಸ್ತೀರ್ಣ 25 ವರೆ * 48 ಅಡಿ ಇತ್ತು ಎಂದರೆ ಸರಿ . ಸದರಿ ನಿವೇಶನದ ದಕ್ಷಿಣಕ್ಕೆ ಡಿ.ಚಿಕ್ಕಣ್ಣರವರ ಮನೆ ಇರುತ್ತದೆ ಎಂದರೆ ಸರಿ. ಸದರಿ ನಿವೇಶನದ ಪಕ್ಕದಲ್ಲಿರುವ ನಿವೇಶನವನ್ನು ಸದರಿ ಶಿವಲಿಂಗಯ್ಯರವರು ದಿಃ 14-11-1958 ರ ಕ್ರಯಪತ್ರದಂತೆ ಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಆಸ್ತಿಯಲ್ಲಿ ಮಾಳಿಗೆ ಮನೆ ಮತ್ತು ಅಂಗಳ ಇತ್ತು ಎಂದರೆ ಸರಿ .

7. ಪ್ರತಿವಾದಿಯ ಅಜ್ಜಿ ದೊಡ್ಡಮ್ಮರವರು ನನ್ನ ಮನೆಯ ದಕ್ಷಿಣಕ್ಕಿರುವ ಜಾಗವನ್ನು ದಿಃ 21-04-1952 ರ ಕರಯಪತ್ರದಂತೆ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಸದರಿ ಜಾಗದಲ್ಲಿ ಪೂರ್ವದ ಕಡೆ ಮನೆ ಮತ್ತು ಪಶ್ಚಿಮದ ಕಡೆ ಪಾಳು ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಪಶ್ಚಿಮದ ಕಡೆ ಇರುವ ಖಾಲಿ ಜಾಗ ನನಗೆ ಸೇರಿದ್ದು ಎನ್ನುತ್ತಾರೆ. ಸದರಿ ನಿ.ಡಿ.3 ರಲ್ಲಿ ಹಳೆಯ ಮನೆ ದೊಡ್ಡಮ್ಮರವರು ಖರೀದಿಸಿದ ಮನೆ ಎಂದರೆ ಸಾಕ್ಷಿ ಅದು ಈಶ್ವರಪ್ಪರವರಿಗೆ ಸೇರಿದ್ದು ಎನ್ನುತ್ತಾರೆ. ಸದರಿ ಹಳೇಮನೆಯ ಮುಂದೆ ಇರುವ ಖಾಲಿ ಜಾಗವನ್ನು ದೊಡ್ಡಮ್ಮರವರು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

8. ಮೇಲ್ಕಂಡ ಎಲ್ಲಾಆಸ್ತಿಗಳನ್ನು ಶಿವಲಿಂಗಯ್ಯ ಮತ್ತು ಈಶ್ವರಯ್ಯರವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಅದರ ಪ್ರಕಾರ ಅವರುಗಳ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಮತ್ತು ಪಹಣಿ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಶ್ವರಪ್ಪರವರು ಮೃತಪಟ್ಟ ನಂತರ ಅವರ ಮೊದಲನೇ ಮಗ ಮಹಾದೇವಯ್ಯ ಮತ್ತು ಹೆಂಡತಿ ಸಹ ಮರಣಹೊಂದಿರುತ್ತಾರೆ ಎಂದರೆ ಸರಿ. ನಂತರ ಈಶ್ವರಪ್ಪರವರ ಪಾಲಿಗೆ ಬಂದ ಆಸ್ತಿಯ ಖಾತೆ 2 ನೇ ಹೆಂಡತಿ ಶಾರದಮ್ಮ ರವರ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಶಾರದಮ್ಮರವರ ಮಗ ಮಹೇಶ್ ದಿಃ 25-09-2010 ರ ಕ್ರಯಪತ್ರದ ಮುಖಾಂತರ ಸದರಿ ಆಸ್ತಿಯನ್ನು ಶಾರದಮ್ಮ ಮತ್ತು ಜಯಮ್ಮ ಎನ್ನುವವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಅದರ ವಿಸ್ತೀರ್ಣ 54 * 12 ವರೆ ಅಡಿ ಎಂದರೆ ಸರಿಯಲ್ಲ. ಸದರಿ ಜಾಗದ ಚಕ್ಕುಬಂದಿ ಪೂರ್ವಕ್ಕೆ - ಗಲ್ಲಿ , ಪಶ್ಚಿಮಕ್ಕೆ- ಪಂಚಾಯಿತಿ ರಸ್ತೆ , ಉತ್ತರಕ್ಕೆ - ನಮ್ಮ ಮನೆಯ ಪಕ್ಕದಲ್ಲಿರುವ ಗಲ್ಲಿ , ದಕ್ಷಿಣಕ್ಕೆ- ಶಿವಲಿಂಗಯ್ಯನವರ ಆಸ್ತಿ ಎಂದರೆ ಸರಿಯಲ್ಲ. ಈ ಸ್ವತ್ತನ್ನು ಪ್ರತಿವಾದಿ ಸದರಿ ಮಹೇಶ್ ರವರಿಂದ ದಿಃ 21-02-2015 ರ ಕ್ರಯಪತ್ರದ ಮುಖಾಂತರ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದಲೂ ನಮ್ಮ ಮನೆಯ ದಕ್ಷಿಣದಲ್ಲಿರುವ ಜಾಗದಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

9. ಪ್ರತಿವಾದಿ ಅವರ ಜಾಗದಲ್ಲಿ ಒಂದು ಮನೆ ನಿರ್ಮಿಸಿರುತ್ತಾರೆ ಎಂದರೆ ಸರಿ ಸಾಕ್ಷಿಗೆ ಸದರಿ ಮನೆಯ ಭಾವಚಿತ್ರ ತೋರಿಸಲಾಗಿ ಅದನ್ನು ಗುರುತಿಸಿದ್ದು ಅದನ್ನು ನಿ.ಡಿ.4 ಎಂದು ಗುರುತಿಸಲಾಯಿತು. ಪ್ರತಿವಾದಿಯ ಮನೆಯ ಮುಂದಿರುವ ಖಾಲಿ ಜಾಗ ಅವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಖಾಲಿ ಜಾಗ ಮೂಲತಃ ವಾದಿಯ ಅಜ್ಜಿ ಖರೀದಿಸಿದ್ದು ನಂತರ ವಾದಿ ಮಹೇಶ್ ರವರ ಮೂಲಕ ಖರೀದಿಸಿದ್ದ ಆಸ್ತಿ ಎಂದರೆ ಸರಿಯಲ್ಲ. ಪ್ರತಿವಾದಿ ಖರೀದಿಸಿದ ಜಾಗಕ್ಕೆ ಪಂಚಾಯಿತಿಯಲ್ಲಿ ಖಾತೆ ವರ್ಗಾವಣೆ ಮಾಡಲು ನಾನು ತಕರಾರು ಸಲ್ಲಿಸಿ ತಡೆದಿರುತ್ತೇನೆ ಎಂದರೆ ಸರಿ.

10. ನನಗೂ ಮತ್ತು ಪ್ರತಿವಾದಿಯ ಮನೆಯ ಮುಂದಿರುವ ಖಾಲಿ ಜಾಗಕ್ಕೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಪಕ್ಕದಲ್ಲಿರುವ ಗಲ್ಲಿಯ ನಂತರ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಗಲ್ಲಿಯ ನಂತರ ಇರುವ ಜಾಗ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಗಲ್ಲಿಯ ನಂತರ ರಸ್ತೆ ಇದೆ ಎಂದು ತೋರಿಸಲು ಪಂಚಾಯಿತಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ಖರೀದಿಸಿದ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿದ್ದರೂ ಸಹ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾವೆ ಸಲ್ಲಿಸಿ, ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನ ಇ - ಖಾತೆ ಮಾಡಿಸಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲಾಗಿ ನಿ.ಪಿ.2 ರಿಂದ 5 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮನೆಯ ದಕ್ಷಿಣಕ್ಕಿರುವ ಗಲ್ಲಿಯಲ್ಲಿ ನಾನು ಪೂರ್ವದಿಂದ ಪಶ್ಚಿಮದ ಕಡೆಗೆ ಓಡಾಡಿಕೊಂಡು ಇರುತ್ತೇನೆ ಎಂದರೆ ಸರಿ . ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**